# 145

# ಸರ್ವಜ್ಞ ವಚನಗಳು

## (ಪ್ರಥಮ ಭಾಗ)

•

ಸಂಗ್ರಾಹಕರು:

**ಕುಡ್ಪಿ ವಾಸುದೇವ ಶೆಣೈ,**

**ಮಂಗಳೂರು.**

**1957.**

ಒಂದಾಣೆ ಮಾಲೆ

# ಒಂದಾಣೆ ಮಾಲೆಯಲ್ಲಿ

## ತಾ. 13-7-1957ರ ವರೆಗೆ ಪ್ರಕಟವಾದ ಪುಸ್ತಕಗಳು

೧. ‡ಕೆಪ್ಪಟಿರಾಯ (ವಿನೋದ ಕಥೆ) ದಿ| ಎಂ. ಎನ್. ಕಾಮತ್.
೨. ಸಾರೀಶ್ವರರು (ದ್ವಿತೀಯ ಮುದ್ರಣ) ಶ್ರೀ| ಕುಡ್ಪಿ ವಾಸುದೇವ ಶೆಣೈ.
೩. ಕಳ್ಳನಿಗೆ ಸಂಭಾವನೆ (ದ್ವಿತೀಯ ಮುದ್ರಣ) ಶ್ರೀ| ಎಲ್. ಎಸ್. ನಾಯಕ.
೪. ‡ಸದ್ರಿ ಸುಬ್ಬ (ಏಕಾಂಕ ಪ್ರಹಸನ) ದಿ| ಎಂ. ಎನ್. ಕಾಮತ್.
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ) ವೈದ್ಯಗುರು ಎಂ. ಆರ್. ಭಟ್.
೬. ‡ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ) ಕುಡ್ಪಿ ವಾಸುದೇವ ಶೆಣೈ.
೭. ‡'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು) ದಿ| ಎಂ.ಎನ್.
೮. ‡ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ) [ಕಾಮತ್.
೯. ಲಂಚಕ್ಕೆ ಸಂಚಕಾರ (ದ್ವಿತೀಯ ಮುದ್ರಣ) ಡಾ| ಎಸ್. ಪಿ. ಭಟ್.
೧೦. ‡ಟಿಶ್ಯೂ ಔಷಧಿಗಳ ಕೈಪಿಡಿ. ಶ್ರೀ| ಪಿ. ಎಸ್. ವೆಂಕಟಕೃಷ್ಣರಾವ್.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ಐದನೇ ಮುದ್ರಣ).
೧೨. ಜೀವದ ಮೌಲ್ಯ (ದ್ವಿತೀಯ ಮುದ್ರಣ) ಶ್ರೀ| ಎಲ್. ಎಸ್. ನಾಯಕ.
೧೩. ‡ಸತ್ತವನ ಸೇಡು ಮತ್ತು ಇತರ ಕಥೆಗಳು ಡಾ| ವಿ. ಆರ್. ಭಟ್.
೧೪. ‡"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ದ್ವಿತೀಯ ಮುದ್ರಣ) ಶ್ರೀ| ಕುಡ್ಪಿ ವಾಸುದೇವ ಶೆಣೈ.
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ) ದಿ| ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭. ಒಗಟುಗಳು (ದ್ವಿತೀಯ ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೧೮. ಜಗಳಗಂಟಿ ಮತ್ತು ಇತರ ಕಥೆಗಳು (ದ್ವಿ.ಮು.) ವೈದ್ಯಗುರು ಎಂ. ಆರ್. ಭಟ್.
೧೯. ರಥೋತ್ಸವ.
೨೦. ‡ಕರಿನಾಯಿ ಮತ್ತು ಮುಪ್ಪು ದಿ| ಎಂ. ಎನ್. ಕಾಮತ್.
೨೧. ಭಾರತದ ಮಹಾನಗರಗಳು (ದ್ವಿ. ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ) ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು (ದ್ವಿ.ಮು.) ಶ್ರೀ| ಬಿ. ಶಂಕರ ಭಟ್.
೨೪. ಭಾರತದ ಮಹಾನಗರಗಳು (ದ್ವಿತೀಯ ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೫. ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು ಶ್ರೀ| ಎಲ್. ಎಸ್. ನಾಯಕ.
೨೬. ಮಾಕಾವತಾರ (ದ್ವಿತೀಯ ಮುದ್ರಣ) ಶ್ರೀ| ಜಿ.ಆರ್.ಪಾಂಡೇಶ್ವರ.
೨೭. ಹಾಸವಿಲಾಸ [ದ್ವಿ.ಮು.] ಶ್ರೀ| ಕುಡ್ಪಿ ವಾಸುದೇವ ಶೆಣೈ.
೨೮. ಸತ್ಯವಂತ ಬಾಬಿ [ದ್ವಿತೀಯ ಮುದ್ರಣ] ಶ್ರೀ| ಕುಡ್ಪಿ ವಾಸುದೇವ ಶೆಣೈ.
೨೯. ಜಾಣ್ಮೆಯ ಒಗಟುಗಳು ಡಾ| ಎಸ್. ಪಿ. ಭಟ್.
೩೦. ಜಾತಕ ಕಥೆಗಳು [ದ್ವಿ.ಮು.] ಶ್ರೀ| ಎಂ. ಸುಬ್ರಾಯನ್.
೩೧. ಕಾರ್ಕಳದ ಚರಿತ್ರೆ ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೩೨. ಮರ್ಜಿ [ಏಕಾಂಕ ಪ್ರಹಸನ] ದಿ| ಎಂ. ಎನ್. ಕಾಮತ್.

[14ನೇ ಪುಟಕ್ಕೆ ಮುಂದುವರಿದಿದೆ]

# ಸರ್ವಜ್ಞ ವಚನಗಳು

## (ಭಾಗ ೧)

ಗುರುವೆ ನಿಮ್ಮನು ನೆನೆದು । ಉರಿವ ಕಿಚ್ಚನು ಹೊಗಲು ।
ಉರಿ ತಗ್ಗಿ ಉದಕಕಂಡಂತೆ ಕರುಣ ।
ದಿರವು ಇದ್ದವಗೆ. ಸರ್ವಜ್ಞ. ॥ ೧ ॥

ಮೂರಿಟ್ಟೆರಾರಕ್ಕು । ಆರು ಹನ್ನೆರಡಕ್ಕು ।
ಹೇರುವಾ ಗೊಡ್ಡು ಹಯನಕ್ಕು ಗುರುಕರಣ ।
ಸೇರುವ ಕಾಲಕ್ಕೆ. ಸರ್ವಜ್ಞ. ॥ ೨ ॥

ಜೀಯ ಸದ್ಗುರುನಾಥ । ಕಾಯಪುಷಿಯನೆ ತೋರಿ ।
ಮಾಯಪಾಶವನು ಹರಿಸುತ್ತ ಶಿಷ್ಯಂಗೆ ।
ತಾಯಿ ತಂದ್ಯಾದ. ಸರ್ವಜ್ಞ. ॥ ೩ ॥

---

## ಮುನ್ನುಡಿ

'ಒಂದಾಣೆ ಮಾಲೆ'ಯಲ್ಲಿ ಉತ್ತಮವೂ ಉಪಯುಕ್ತವೂ ಆದ ಸಾಹಿತ್ಯವನ್ನು ಮಾತ್ರ ಆರಿಸಿಕೊಡುವ ನಮ್ಮ ಧೋರಣೆಗನುಗುಣವಾಗಿ, ಸರ್ವಜ್ಞ ವಚನಗಳನ್ನು ಈ ನಮ್ಮ 145ನೇ ಪುಸ್ತಕಕ್ಕಾಗಿ ಆಯ್ದುಕೊಂಡಿರುವೆವು.

ನಮಗೆ ದೊರೆತಂತೆ ಇವುಗಳನ್ನು ಪ್ರಕಟಿಸುವ ಕಾರಣ, ವಾರವಾರವೂ ಒಂದೊಂದೇ ಭಾಗವನ್ನು ಕ್ರಮವಾಗಿ ಹೊರಡಿಸಲಾಗುವುದಿಲ್ಲ. ಪ್ರಕಟವಾದಂತೆ ಆಯಾ ಭಾಗದ ಸಂಖ್ಯೆಯನ್ನು ಮುಖಪತ್ರದಲ್ಲಿ ಕೊಡಲಾಗುವುದು. ಹೀಗೆ, ಈ ಪ್ರಥಮ ಭಾಗವು ಪ್ರಕಟವಾದ ಕೆಲವು ವಾರಗಳ ಅನಂತರ ಎರಡನೇ ಭಾಗವೂ ಆ ಮೇಲೆ ಅನುಕೂಲವೆನಿಸಿದಂತೆ 3ನೇ, 4ನೇ ಭಾಗಗಳೂ ಪ್ರಕಟವಾಗುವುವು.

**ಕುಡ್ಪಿ ವಾಸುದೇವ ಶೆಣೈ.**

ಮತ್ತೆ ಸದ್ಗುರು ಮುಖದಿ । ತತ್ತ್ವಮಸಿಯನೆ ತಿಳಿದು ।
ಸತ್ಯವು ಎಂದು ನಿರ್ಧರಿಸಿದಾ ಮೇಲೆ ।
ಸತ್ತು ಹುಟ್ಟುವನೆ? ಸರ್ವಜ್ಞ. ॥ ೪ ॥

ಉರಿವುಂಡ ಕರ್ಪುರವು । ಸರಕು ಮಾರುವುದುಂಟೆ ।
ಗುರುಕೃಪೆಯಿಂದ ನಿಜದೊಳಗೆ ಬೆರೆದಾತ ।
ನೆರಕಕೂಡುವನೆ? ಸರ್ವಜ್ಞ. ॥ ೫ ॥

ಸುರತರು ಮರವಲ್ಲ । ಸುರಭಿವೊಂದಾನಲ್ಲ ।
ಪರುಷಪಾಷಾಣದೊಳಗಲ್ಲ, ಗುರುರಾಯ ।
ನರರೊಳಗಲ್ಲ ಸರ್ವಜ್ಞ. ॥ ೬ ॥

ಮೂರು ಕಣೀಶ್ವರನ । ತೋರಿಕೊಡಬಲ್ಲ ಗುರು ।
ಬೇರಿರುವದೊಂದು ತೆರವಿಲ್ಲ ಗುರುಕರುಣ ।
ತೋರುವುದು ಶಿವನ. ಸರ್ವಜ್ಞ. ॥ ೭ ॥

ಬೆಳಗನುಂಗಿದ ಗುರುವು । ಒಳಗೆ ನುಂಗಿದ ಶಿಷ್ಯ ।
ಒಳಗಿಂದ ಒಳಗನರಿದೊಡ ಪರಬ್ರಹ್ಮ ।
ದುಳುಮೆ ತಾನಕ್ಕು. ಸರ್ವಜ್ಞ. ॥ ೮ ॥

ಪರತತ್ವ ತನ್ನೊಳಗೆ । ಎರವಿಲ್ಲದಿರುತಿರಲು ।
ಪರದೇಶಿಯಾಗಿ ಇರುತಿರಲಾತನು ।
ಪರಮಗುರುವೆಂದ. ಸರ್ವಜ್ಞ. ॥ ೯ ॥

ಬಳ್ಳಿಗುರುಡರು ಕೂಡಿ । ಹಳ್ಳವನು ಬಿದ್ದಂತೆ ।
ಒಳ್ಳೆಯ ಗುರುವಿನುಪದೇಶವಿಲ್ಲದಿರೆ ।
ಎಲ್ಲಿಹುದು ಮುಕ್ತಿ? ಸರ್ವಜ್ಞ. ॥ ೧೦ ॥

ಸಾಣೆ ಶ್ರೀಗಂಧವನು । ಮಾಣದೇ ತೇಷಂತೆ ।
ಜಾಣ ಶ್ರೀಗುರುವಿನುಪದೇಶವಾದವಗೆ ।
ಕಾಣಿವುದು ಮುಕ್ತಿ. ಸರ್ವಜ್ಞ. ॥ ೧೧ ॥

ಬೆಳಗನುಂಗಿದ ಗುರುವಿ । ನೊಳಗೆ ಬಲ್ಲವರಾರು ।
ಒಳಗಿನ ಬೆಳಗನರಿದೊಡೆ ಕೈಲಾಸ ।
ಕರತಲಾಮಲಕ್ಕ. ಸರ್ವಜ್ಞ. ॥ ೧೨ ॥

ಊರಿಂಗೆ ದಾರಿಯನು । ಆರು ತೋರಿದೊಡೇನು ।
ಸಾರಾಯ[1] ಮಪ್ಪ ಪರವ ತೋರಿದ ಗುರುವು ।
ಯಾರಾದೊಡೇನು? ಸರ್ವಜ್ಞ. ॥ ೧೩ ॥

ಹರತನ್ನೊಳಗಿರ್ದನು । ಗುರು ತೋರದಿರ್ದೊಡೆ ।
ಮರದೊಳಗೆ ಅಗ್ನಿ ಇರುತಿರ್ದು ತನ್ನ ತಾ ।
ನರಿಯದೇಕೆಂದ. ಸರ್ವಜ್ಞ. ॥ ೧೪ ॥

ಮೊಸರು ಕಡೆದೊಡೆ ಬೆಣ್ಣೆ । ಒಸಿದು ಮೇಲ್ಬರುವಂತೆ ।
ಹೊಸದಾಡಿ ಬೆಣ್ಣೆ ಕೆರಳ್ವಂತೆ ಗುರುವಿನ ।
ವಶದೊಳಿರೆ ಮುಕ್ತಿ. ಸರ್ವಜ್ಞ. ॥ ೧೫ ॥

ತುಪ್ಪಾದ ಬಳಿಕಿನ್ನು । ಹೆಪ್ಪನೆರೆದವರುಂಟೆ ।
ನಿಃಪತಿಯಾದ ಗುರುವಿನುಪದೇಶದಿಂ ।
ತಪ್ಪುವದೆ ಮುಕ್ತಿ. ಸರ್ವಜ್ಞ. ॥ ೧೬ ॥

ತಿರಿದ್ದರಿದು ಕೊರೆದು । ಕರೆದು ಧರ್ಮವ ಮಾಡೆ ।
ಪರಿಣಾಮವಕ್ಕು ಪದಮಕ್ಕು ಗುರುಪಾದ ।
ನೆರೆಮನೆಯಕ್ಕು. ಸರ್ವಜ್ಞ. ॥ ೧೭ ॥

ತಾಪದಾ ಸಂಸಾರ । ಕೂಪದಲಿ ಬಿದ್ದವರು ।
ಕೂಪವನೊಡೆದು ಪೊರವಡೆ, ಗುರುಪಾದ ।
ಸೋಪಾನ ಕಡೆಗೆ. ಸರ್ವಜ್ಞ. ॥ ೧೮ ॥

ತಂದಿಂಗೆ ಗುರುವಿಂಗೆ । ಒಂದೆ ಅಂತರವುಂಟು ।
ತಂದೆತೋರುವನು ಬಹುಬುದ್ಧಿ ಗುರುವಿಂದ ।
ಬಂಧನ ಬಯಲು. ಸರ್ವಜ್ಞ. ॥ ೧೯ ॥

---

1 ಸಾರಾಯ = ಸಾರಾಂಶ.

ಹೇಳಿಹೇಳರು ಸಹಜ | ಹೇಳಲಿಕೆ ಬಾರದು |
ಹೇಳದೊಡೆ ಮುಂದೆ ಕೇಳಿ ಗುರುಶಿಷ್ಯರ |
ಸಂವಾದದಾಳಿ. ಸರ್ವಜ್ಞ. || ೨೦ ||

ಹೇಳಿದ್ದ ಹೇಳುವರು | ಕೇಳಿದ್ದ ಕೇಳುವರು |
ಕೇಳಿದ್ದ ಕೇಳಿ ಸುಖಿಸುವರು ಗುರುಗಳು |
ಹೇಳ್ವ ತೆರಬೇರೆ. ಸರ್ವಜ್ಞ. || ೨೧ ||

ಕಲ್ಲು ದೈವಗಳೆಂಬ | ಸಲ್ಲದಾ ಮಡಿಬೇಡ |
ಕಲ್ಲಿನೊಳು ಕಳೆಯನಿಡಬಲ್ಲ ಗುರುವಿನ |
ಸೊಲ್ಲು ಲಾಲಿಸು. ಸರ್ವಜ್ಞ. || ೨೨ ||

ಪರಮನ್ನೈವೊಗವಳಿದು | ನೆರವಿಯನೊಲ್ಲದೆನ- |
ರರೂಪತಾಳಿ ಗುರುವಾಗಿ ಬೋಧಿಸಗೆ |
ಸರಿಯಾರು ಕಾಣೆ. ಸರ್ವಜ್ಞ. || ೨೩ ||

ದರುಶನವು ಆರಿಂಪು | ಪುರುಷ ಮೂವ್ವರರಿಂಪು |
ಪರತತ್ವದಿರವು ಬೇರೆಂದು ತೋರಿದ |
ಗುರು ತಾನೆ ದೈವ. ಸರ್ವಜ್ಞ. || ೨೪ ||

ಗುರುರಾಯನುಪದೇಶ | ದೊರಕೊಂಡಿತಾದಡೇ |
ಹರಿವುದು ಪಾಪವೆಂತೆನಲು ವಜ್ರದಿಂ |
ಗಿರಿಯು ಹೊಯಿದಂತೆ. ಸರ್ವಜ್ಞ. || ೨೫ ||

ಮಂಡೆ ಬೋಳಾದಡಂ | ದಂಡ ಕೋಲ್ಪಿಡಿದಡಂ |
ಹೆಂಡತಿಯ ಬಿಟ್ಟು ನಡೆದ ಡಂಗುರಮುಖವ |
ಕಂಡಲ್ಲದಿಲ್ಲ. ಸರ್ವಜ್ಞ. || ೨೬ ||

ಹೊಲಬನರಿಯದ ಗುರುವು | ತಿಳಿಯಲರಿಯದ ಶಿಷ್ಯ |
ನೆಲೆಯನಾರಯ್ಯದುಪದೇಶವಂಧಕನು |
ಕೊಳನು ಹೊಕ್ಕಂತೆ. ಸರ್ವಜ್ಞ. || ೨೭ ||

ಹಸಿಯ ಸಮಿಧೆಯ ತಂದು । ಹೊಸೆದಡುಂಟೇ ಕಿಚ್ಚು ।
ವಿಷಯಗಳುಳ್ಳ ಮನುಜಂಗೆ ಗುರುಕರುಣ ।
ವಶವರ್ತಿಯಹುದೆ. ಸರ್ವಜ್ಞ. ॥ ೨೮ ॥

ಬ್ರಹ್ಮವೆಂಬುದು ತಾನು । ಮೊಮಾಂನುಗೀಳವೇ ।
ಮೊಯ ಸಗ್ಗುರುವಿನುಪದೇಶ ಸಲಿಸಲು ।
ಘಂಮಾನೆ ಮುಕ್ತಿ. ಸರ್ವಜ್ಞ. ॥ ೨೯ ॥

ಕಾಯಕಮಲವೆ ಸಂಜ್ಞೆ । ಜೀವರತ್ನವೆ ಲಿಂಗ ।
ಭಾವಪುಷ್ಪದರ ಶಿವಪೂಜೆ ಮಾಡುವರು ।
ದೇವಕಿಂದಂಬೆ. ಸರ್ವಜ್ಞ ॥ ೩೦ ॥

ಓದುವಾದಗಳೇಕೆ । ಗಾದೆಯ ಮಾತ್ಯಾಕೆ ।
ವೇದಪೌರಾಣ ನಿನಗ್ಯಾಕೆ ಲಿಂಗದ ।
ಹಾದಿಯರಿಯದವಗೆ. ಸರ್ವಜ್ಞ. ॥ ೩೧ ॥

ಆತ್ಮದ ಲಿಂಗವನು । ಪ್ರೀತಿಯಂದರಿದೊಡೆ ।
ಸೂತಕವಿಲ್ಲ ಭಯವಿಲ್ಲ ಪಂಚಮಹಾ ।
ಪಾತಕವಿಲ್ಲ. ಸರ್ವಜ್ಞ. ॥ ೩೨ ॥

ಒಪ್ಪಾದ ನುಡಿಯಾಕೆ । ಪುಷ್ಪಯನ್ನಿಸಲ್ಯಾಕೆ ।
ಅರ್ಪಿತದ ಗೊಡವೆ ನಿಮಗ್ಯಾಕೆ ಲಿಂಗದ ।
ನಪ್ಪನರಿದವಗೆ. ಸರ್ವಜ್ಞ. ॥ ೩೩ ॥

ವಾರಣಾಸಿಗೆ ಹೋಹ । ಕಾರಣವೇನಯ್ಯ ।
ಕಾರಣಾತ್ಮಕನು ಕರದೊಳಗೆ ತಾನಿರಲು ।
ದೂರವ್ಯಾಕಯ್ಯ. ಸರ್ವಜ್ಞ. ॥ ೩೪ ॥

ಗಂಗೆ ಗೋದಾವರಿಯು । ತುಂಗಭದ್ರೆಯು ಹಿಮಂತೆ ।
ಹಿಂಗದೆ ಮುಳುಗಿ ಫಲವೇನು ನಿನ್ನಲ್ಲಿ ।
ಲಿಂಗದರುವಿಲ್ಲ. ಸರ್ವಜ್ಞ. ॥ ೩೫ ॥

ಆದಿಯ ಲಿಂಗವನು । ಭೇದಿಸಲರಿಯದೆ ।
ಹಾದಿಯಡಿಮಾಡಿ ನಮಿಸುವ ಮನುಜರು ।
ಮಾದಿಗರು ನೋಡು. ಸರ್ವಜ್ಞ. ॥ ೩೬ ॥

ಮೆಟ್ಟಿದ ಕಲ್ಲಿಂಗೆ । ಮೊಟ್ಟೆಪತ್ರೀ ಹಾಕಿ ।
ಕಟ್ಟಿದ ಲಿಂಗ ಅಡಿಮಾಡಿ ಶರಣೆಂಬ ।
ಭ್ರಷ್ಟರನು ಕಂಡ್ಯ. ಸರ್ವಜ್ಞ. ॥ ೩೭ ॥

ಇಷ್ಟಲಿಂಗದಿ ಮನವ । ನೆಟ್ಟನೆ ನಿಲಿಸದೆ ।
ಕಷ್ಟ ಭ್ರಮೆಯೊಳಗೆ ಮುಳುಗಿರಲು ಕರ್ಮದ ।
ಬಟ್ಟೆಗೆ ಹೋಹ. ಸರ್ವಜ್ಞ. ॥ ೩೮ ॥

ಅಂಗದಿಚ್ಛೆಗೆ ಹರಿದು । ಭಂಗಗೊಳದಿರು ಮನುಜ ।
ಲಿಂಗದಲಿ ನೆನಹು ನಿಲಿಸಿ ಸತ್ಯದಿ ನೀತಿ ।
ಲಿಂಗವೆಯಾಹೆ. ಸರ್ವಜ್ಞ. ॥ ೩೯ ॥

ಲಿಂಗದಲಿ ನಡೆಯಾಗಿ । ಲಿಂಗದಲಿ ನುಡಿಯಾಗಿ ।
ಲಿಂಗದಲಿ ನೋಟ ನೆಡೆಕೂಟವಾದವನು ।
ಲಿಂಗವೆಯಕ್ಕು. ಸರ್ವಜ್ಞ. ॥ ೪೦ ॥

ಲಿಂಗದೆ ದರುಶನವು । ಲಿಂಗಸ್ಪರುಶನವು ।
ಲಿಂಗ ಸಹ ಸರ್ವಸುಖಭೋಗವಾದವನು ।
ಲಿಂಗವೆಯಕ್ಕು. ಸರ್ವಜ್ಞ ॥ ೪೧ ॥

ಲಿಂಗದಲಿ ನೆನವಾಗಿ । ಲಿಂಗದಲಿ ಮನವಾಗಿ ।
ಲಿಂಗದಲಿ ನೋಟ ನುಡಿಬ್ಯಾಟವಾದವನು ।
ಲಿಂಗವೆಯಕ್ಕು. ಸರ್ವಜ್ಞ ॥ ೪೨ ॥

ಒಡೆಯಕೆಂದೆನಲೇಕೆ । ತಡೆಯಲ್ಲಿ ನಿಲಲೇಕೆ ।
ಮೃಡರೂಪನೆನಿಸಿಕೊಳಲ್ಯಾಕೆ ಜಂಗಮಕೆ ।
ಕಡೆಯಿಲ್ಲದುದಕೆ. ಸರ್ವಜ್ಞ. ॥ ೪೩ ॥

ದೇಹಿಯೊಂದೆನಬ್ಯಾಡ ನಿ | ದೇಹಿ ಜಂಗಮವು |
ದೇಹ ಗುಣದಾಸೆಯಳಿದೊಡೆ ಆತ ಆತ ನಿ |
ದೇಹಿ ಕಂಡಯ್ಯ. ಸರ್ವಜ್ಞ. || ೪೪ ||

ಮಂಡೆ ಬೋಳಾದವರ | ಕಂಡು ನಂಬಲಿಬ್ಯಾಡ |
ಖಂಡಿತವಪ್ಪ ಪರತತ್ವವುಳ್ಳವರ |
ಕಂಡರೇ ನಂಬು. ಸರ್ವಜ್ಞ. || ೪೫ ||

ಕಾಶಿ ಕಂಚಡಿಯಾಕೆ | ಅಸುರದ ಜೆಡೆಯಾಕೆ |
ಕೇಶವನು ಕಿತ್ತುಕೊಳಲ್ಯಾಕೆ ಮನಸಿನ |
ಆಸೆ ಬಿಡದನಕ. ಸರ್ವಜ್ಞ. || ೪೬ ||

ನಿತ್ಯಸೇಮಗಳೇಕೆ ! ಮತ್ತೆ ಪೂಜೆಗಳ್ಯಾಕೆ |
ನೆತ್ತಿ ಬೋಳ್ಯಾಕೆ ಜಡೆಯಾಕೆ ವದನದಲಿ |
ಸತ್ಯವುಳ್ಳವಗೆ. ಸರ್ವಜ್ಞ. || ೪೭ ||

ಜಡೆಯ ಕಟ್ಟಲು ಬಹುದು | ತಡಸ ನುಡಿಯಲು ಬಹುದು !
ಬಿಡದೆ ದೇಗುಲದಿಯಿರಬಹುದು ಕರಣಗಳ |
ತಡೆವುದು ಕಷ್ಟ. ಸರ್ವಜ್ಞ. || ೪೮ ||

ಆರರಟ್ಟುಳಿಯನು | ಮೂರ ಕಂಟಕವನು |
ಯೇರಿದ ಜವ್ವನವ ತಡೆದರೆ ಶಿವ ತಾನು |
ಬ್ಯಾರೆಯಿಲ್ಲೆಂದ. ಸರ್ವಜ್ಞ. || ೪೯ ||

ಯವ್ವನದ ಹಿಂಡುಗಳ | ಐವರುಟ್ಟುಳಿಗಳನು |
ಐವರನು ವಶಕ್ಕೆ ತಂದಾತ ಲೋಕಕ್ಕೆ |
ದೈವತಾನಕ್ಕು. ಸರ್ವಜ್ಞ. || ೫೦ ||

ವಿಷಯದ ಪುಡಿಯವನು | ಬಿಸಿಮಾಡಿಕೊಳ್ಳಲು |
ಪಶುಪತಿಯಕ್ಕು ಪದವಕ್ಕು ವೈಬಣ್ಣ |
ಕುಸುಮದಂತಕ್ಕು. ಸರ್ವಜ್ಞ. || ೫೧ ||

ಬಿಂದುವು ಮೂತ್ರವು | ಒಂದೆ ನಾಳದಿ ಬಕ್ಕು |
ಒಂದು ಬಿಟ್ಟೊಂದು ತಡೆದರೆ ಪರಬ್ರಹ್ಮ |
ಮುಂದೆ ಬಂದಕ್ಕು. ಸರ್ವಜ್ಞ. || ೫೨ ||

ಬೇಡಯಿಕ್ಕಿದರಂಬು | ಕೂಡನು ಜಾತಿಯನು |
ಪೋದು ಮಾಣಿಕವು ಸರಿಯೆಂಬ ಯೋಗಿಯನು |
ಕಾಡುವಳೆ ಮಾಯೆ ? ಸರ್ವಜ್ಞ. || ೫೩ ||

ಮನದಲ್ಲಿ ನೆನೆದವಗೆ | ಮನೆಯೇನು ಮಠವೇನು |
ಮನದಲ್ಲಿ ನೆನಹೆಮರದೊಡೆ ದೇಗುಲದ |
ಕೊನೆಯಲ್ಲಿದ್ದೇನು. ಸರ್ವಜ್ಞ. || ೫೪ ||

ಮನೆಯೇನು ವನವೇನು | ನೆನಹುಯಿದ್ದರೆ ಸಾಕು |
ನೆನೆಯದೆ ಶಿವನ ಮರೆತೊಡೆ ಪರ್ವತದ |
ಕೊನೆಯಲ್ಲಿದ್ದೇನು. ಸರ್ವಜ್ಞ. || ೫೫ ||

ಮಾಯಮೋಹವನೆಚ್ಚಿ | ಕಾಯವನು ಕರಗಿಸುತ |
ಸಾಹಸವಗೊಳುತಯಿರಬೇಡಿ ಅಡಿಗಡಿಗೆ |
ಕಾಯೊ ಶಿವಯೆನ್ನು. ಸರ್ವಜ್ಞ. || ೫೬ ||

ಜ್ಞಾನವುಳ್ಳವ ನೋಡಲು | ಭಾನುವಿನತೆರನಿಹನು |
ಜ್ಞಾನಿಲ್ಲದವನ ಕಾಯವು ಹಾಳೂರ |
ಸ್ಥಾನ ಕಡೆಯು. ಸರ್ವಜ್ಞ. || ೫೭ ||

ಚಂದನವ ಕರಗಿಸಲು | ಬೆಂದು ಪರಿಮಳವಕ್ಕು |
ಸಂದರಿದವನರಿದ ಸತ್ಪುರುಷರು ತಾವು |
ನೊಂದು ಸೈರಿಪರು. ಸರ್ವಜ್ಞ. || ೫೮ ||

ಸಾವಿಂಗೆ ಸಮ್ಮತಿಗೆ ಯಾವುದಂತರವಯ್ಯ |
ಸಾವು ತಾ ಸಮತಿಯೊಳಗಲ್ಲ ಕೋಪವ |
ಕಾವುದೆ ಸಮ್ಮತಿ. ಸರ್ವಜ್ಞ. || ೫೯ ||

ಕೋಪವೆಂಬುದು ಕೇಳಿ । ಪಾಪದಾ ನೆಲೆಗಟ್ಟು ।
ಕೂಪದೊಳು ನೇಣು ಹರಿದಂತೆ ನರಕಕೆ ।
ಕೋಪಿ ತಾನಿಳಿವ. ಸರ್ವಜ್ಞ. ॥ ೬೦ ॥

ಕಪ್ಪೆಗಳು ಮೀನುಗಳು । ಇರ್ಪುದದು ತೀರ್ಥವೇ ।
ತುಪ್ಪವಾಗ'ಕೆ ಸಲುವದು ಸತ್ಪುರುಷ ।
ಸಿಪ್ಪುದೆ ತೀರ್ಥ. ಸರ್ವಜ್ಞ. ॥ ೬೧ ॥

ಕಣ್ಣಿನಿಂದಲೆ ಪುಣ್ಯ । ಕಣ್ಣಿನಿಂದಲೆ ಪಾಪ ।
ಕಣ್ಣಿನಿಂದಿಹಪರವಕ್ಕು ಲೋಕಕ್ಕೆ ।
ಕಣ್ಣು ಕಾರಣ. ಸರ್ವಜ್ಞ. ॥ ೬೨ ॥

ಸತ್ತುಹೋದರೆ ನಿನಗ । ದೆತ್ತಣದು ಮೋಕ್ಷವೈ ।
ಸತ್ತುಹೋಗದ ಮುನ್ನ ಮೋಕ್ಷದ ।
ಗೊತ್ತು ತಿಳಿಯೆಂದ. ಸರ್ವಜ್ಞ. ॥ ೬೩ ॥

ಜೊಳ್ಳುಮನುಜರು ತಾವು । ಸುಳ್ಳು ಸಂಸಾರದೊಳು ।
ಮುಳ್ಳಿಡಿದು ಮಾಯೆಯೆಂಬ ಒಳಬಲೆಯೊಳ್ ।
ಓಲ್ಯಾಡುತಿಹರು. ಸರ್ವಜ್ಞ. ॥ ೬೪ ॥

ಎಣ್ಣೆ ಬೆಣ್ಣೆಯು ಋಣವು । ಅನ್ನವಸ್ತ್ರದ ಋಣವು ।
ಹೊಸ್ಹೆಣ್ಣಿನ ಋಣವು ತೀರಿದಾಕ್ಷಣದಿ ।
ಮಣ್ಣುಪಾಲೆಂದ. ಸರ್ವಜ್ಞ ॥ ೬೫ ॥

ಸತ್ಯ ಸದ್ಗುಣ ತೀರ್ಥ । ಉತ್ತಮರ ನಡೆ ತೀರ್ಥ ।
ಸತ್ಯರ ಸಂಗವದು ತೀರ್ಥ ಹರಿವ ನೀ- ।
ರೆತ್ತಣದ ತೀರ್ಥ? ಸರ್ವಜ್ಞ ॥ ೬೬ ॥

ಆನೆ ತಾತುಡುಗಾಗೆ । ಜ್ಞಾನಿ ಮೂರ್ಖನು ಆಗೆ ।
ಭೂನಾಥ ಜಾರನಾದರೆ ಮಾಣಿಪುದು
ಮಾನವರಿಂಗಳವೆ. ಸರ್ವಜ್ಞ. ॥ ೬೭ ॥

ಆನೆ ಬೀದಿಯಲಿ ಬರೆ । ಶ್ವಾನ ತಾ ಬೊಗಳುವುದು ।
ಶ್ವಾನನಂ ತಾನೆ ಬೊಗಳಿಯಾನೆಯು ಭಿ
ಮಾನವೇ ಹಾನಿ ಸರ್ವಜ್ಞ. ॥ ೧೮ ॥

ಆನೆಗಂಜಿಕೆಯಾಕೆ । ಶ್ವಾನಂಗೆ ಸೊಬಗ್ಯಾಕೆ ।
ದಾನಿಗೆ ದೀನತನವ್ಯಾಕೆ ಜ್ಞಾನಿಗೆ ।
ಹೀನತನ ಯಾಕೆ. ಸರ್ವಜ್ಞ. ॥ ೧೯ ॥

ಒಡಲ ಹೋಗಾಡಿದರು । ನುಡಿಯ ನೀಗಾಡಿದರು ।
ನಡೆಯೊಳುಯೆಡರನು ಬಿಡದಿರಲು ಪರವಶ ।
ದೃಢಮನವಿಡಿದು. ಸರ್ವಜ್ಞ. ॥ ೨೦ ॥

ನೆನೆದು ಪಂಚಾಕ್ಷರಿಯ । ಉಸುರು ಕೊನೆಯಲಿ ನಿಲಿಸಿ ।
ಸಸಿನೆ ಕುಳ್ಳಿರ್ದು ಜಪಿಸದೆ ಯೋಗಿ ತಾ ।
ಕಿಸುವಾಯು ನಕ್ಕ್ಯ ಸರ್ವಜ್ಞ. ॥ ೨೧ ॥

ಅಂತಿರ್ದ ಇಂತಿರ್ದ । ಎಂತಿರ್ದಯೆನಬೇಡಿ ।
ಕಂತೆಯ ಹೊದ್ದು ತಿರಿದುಂಬ ಯೋಗಿ ತಾ ।
ನೆಂತಿರ್ದರೇನು. ಸರ್ವಜ್ಞ. ॥ ೨೨ ॥

ಕರದ ಕಪ್ಪರವುಂಟು । ಹಿರಿದಪ್ಪನಾಡುಂಟು ।
ಹರನೆಂಬ ದೈವನುಂಟು ನವಿತ್ರಂದ ।
ಸಿರಿವಂತರಾರಯ್ಯ. ಸರ್ವಜ್ಞ. ॥ ೨೩ ॥

ಭಿಕ್ಷವ ಬಿಡದಿರಿ । ಇಚ್ಛೆಯ ನುಡಿಯದಿರಿ ।
ಮೆಚ್ಚಿಪೊಂದೂರಲ್ಲಿರದಿರಿ ಶಿವ ನಿಮ್ಮ ।
ಇಚ್ಛೆಯೊಳಿಹನು. ಸರ್ವಜ್ಞ. ॥ ೨೪ ॥

ದೊರಕಿದ್ದನುಂಡು ದೊರಕಿದ್ದುದುಟ್ಟುಟ್ಟು ।
ದೊರಕಿದಾಶಯುನ ಪಡದಾತ ಲೋಕಕ್ಕೆ ।
ನಿರತವಾಗಿಹನು. ಸರ್ವಜ್ಞ. ॥ ೨೫ ॥

ತತ್ತ್ವಮಸಿಯೆಂದೆಂಬ | ಅರ್ಥವನರಿಯದೆ |
ತುತ್ತು ಸವಿಯೆಂದು ಉಣಕಲಿತ ಯೋಗಿಗೆ |
ಎತ್ತಣದು ಮುಕ್ತಿ. ಸರ್ವಜ್ಞ. ೭೬ ||

ಹುತ್ತ ಹಾವಿಗೆ ಚಂದ | ಮುತ್ತು ಕೊರಳಿಗೆ ಚಂದ |
ನಕ್ಷತ್ರ ಚಂದ ಗಗನಕ್ಕೆ ಶಿವಯೋಗಿಗೆ |
ಭಿಕ್ಷವೇ ಚಂದ. ಸರ್ವಜ್ಞ. || ೭೭ ||

ಬೇಡುವದು ಭಿಕ್ಷವನು ಮಾಡುವದು ತಪವನ್ನು |
ನಾಡ ಮಾತುಗಳ ಬಿಡುವದು ಶಿವನೊಳಗೆ |
ಕೂಡಬಹುದೆಂದ. ಸರ್ವಜ್ಞ. || ೭೮ ||

ಭಿಕ್ಷೆಯಾ ಅನ್ನವು | ಮೋಕ್ಷಕ್ಕೆ ಸಾಧನವು |
ಕುಕ್ಷಿಗೆ ನರರ ಕಾಡಿ ಬೇಡುಂಬನ್ನ |
ಮೋಕ್ಷಕ್ಕೆ ದೂರ. ಸರ್ವಜ್ಞ. || ೭೯ ||

ಓದಿ ಬೂದಿಯ ಪೂಸಿ | ಕೋದ ಕಾವಿಯ ಪೊದ್ದು |
ಮೇದಿನಿಯ ಮೇಲೆ ವಿಷಯಕ್ಕೆ ತಿರುಗುವ |
ಮಾದಿಗರ ನೋಡು. ಸರ್ವಜ್ಞ || ೮೦ ||

ಮನವ ಘನದಲಿ ಕಟ್ಟಿ | ನೆನವ ಮನದಲಿ ಕಟ್ಟಿ |
ಮನವ ವಿಷಯಕ್ಕೆ ಎಳಸದ ಯೋಗಿಗೆ |
ವನವಾಸವ್ಯಾಕೆ. ಸರ್ವಜ್ಞ. || ೮೧ ||

ದೂಸಿಯ ಕೊಡನಂತೆ | ಸೂಸುತಿಪ್ಪುದು ಯೋಗ |
ದಾಸಿವರರೊಡನೆ ನಗಲೇ ಮತೊಡದ ಮೇ |
ಲಾಸೆಯಿದ್ದಂತೆ. ಸರ್ವಜ್ಞ. || ೮೨ ||

ಹಸಿವು ಕೊಂದಾತನೆ ದೆಸೆಗೆ ಕೀರ್ತನೆಯಕ್ಕು |
ಪಶುಪತಿಯಕ್ಕು ಪದವಕ್ಕು ಕೈಲಾಸ |
ವಶವರ್ತಿಯಕ್ಕು. ಸರ್ವಜ್ಞ. || ೮೩ ||

ಆಯುದಲಿ ನಿಜದಿಂದ । ದಾಯುನಾನರಿಯದೆ ।
ಆಯಾಸಜಪವ ಜಪಿಸುವ ಯೋಗಿಯಾ ।
ದಾಯ ನೋಡೆಂದ. ಸರ್ವಜ್ಞ. ॥ ೮೪ ॥

ಒಡಲು ಕಾನಳಿವಲ್ಲಿ ಮಡದಿಯರು ಮಡಿದಲ್ಲಿ ।
ಎಡರು ನಿಂದೆಗಳು ಬರುವಲ್ಲಿ ಸಮತೆಯ ।
ಬಿಡದಿರೆ ಯೋಗಿ ಸರ್ವಜ್ಞ. ॥ ೮೫ ॥

ಜಡೆಯು ಕಟ್ಟದ ಮುನ್ನ ಒಡನೆ ಬಂದುದು ಮಾರಿ ।
ಘುಡಿಘುಡಿಸಿ ಹೇನು ಹರಿಯಲು ಬೋಳಯ್ಯ ।
ಕಡುನಗುವನಯ್ಯ. ಸರ್ವಜ್ಞ. ॥ ೮೬ ॥

ದಂಡ ಕೋಲಿನ ತುದಿಗೆ ಹಿಂಡಿಕೈಪವಕಟ್ಟಿ ।
ಮುಂಡೆಯರ ಕಂಡು ಭ್ರಮಿಸುವ ಯೋಗಿಗೆ ।
ಮುಂಡೆ ಬೋಳೇಕೆ. ಸರ್ವಜ್ಞ. ॥ ೮೭ ॥

ಆಲದ್ಧೆಮ್ಮರನಂತೆ । ಜೋಲು ಜೆಡೆಗಳ ಬಿಟ್ಟು ।
ನಾಲಿಗೆ ಕೈಪಶುದ್ಧಿಲ್ಲದವ ಮರಿನಾಯ ।
ಬಾಲದಂತಕ್ಕು. ಸರ್ವಜ್ಞ. ॥ ೮೮ ॥

ಕತ್ತಲೆಯು ತಾವಿಂಗೆ ಉತ್ತಮದ ಜೋತಿ ತಾ ।
ಮತ್ತು ಪ್ರಜ್ವಲಿಸಾ ತಾವು ಬೆಳಗಾಗೆ ।
ಉತ್ತಮವೇಯಕ್ಕು. ಸರ್ವಜ್ಞ. ॥ ೮೯ ॥

ಹಾಲುಂಬ ಹಂಸವನು । ಹೋಲಬಲ್ಲನೆ ಯೋಗಿ ।
ಮೇಲಣ ಪಥವನರಿಯದೊಡೆ ಗಿಣಿವೋದಿ ।
ಕಾಳುಗೆಡದಂತೆ. ಸರ್ವಜ್ಞ. ॥ ೯೦ ॥

ಜಡೆಯುಳ್ಳ ಹಿರಿಯರಿಗೆ । ಹೆಡೆಯುಳ್ಳ ಸರ್ಪನಿಗೆ ।
ನಡುಗುತ್ತ ನಮಿಸಿ ನಯದಿಂದ ಎಚ್ಚರನು ।
ಬಿಡದೆ ಕೂಡೆ ಭಕ್ತಿ. ಸರ್ವಜ್ಞ. ॥ ೯೧ ॥

ಕಪ್ಪರದಲುಂಬರು । ಒಪ್ಪರದಿ ನಡೆವರು ।
ತಪ್ಪಿದರೆ ಹಲ್ಲ ಕಳೆವರು ಮಹಾತ್ಮರ ।
ಒಪ್ಪವನೋಡು. ಸರ್ವಜ್ಞ. ॥ ೯೨ ॥

ತಪವಮಾಡುವೆನೆಂದು ಗುಹೆಯ ಹೊಕ್ಕಿರಬೇಡ ।
ತಪದಲ್ಲಿ ಕುಪಿತ ಬಿಡದಿರಲು ಏತರ ।
ತಪತಾಪ ಕಂಡ್ಯ. ಸರ್ವಜ್ಞ. ॥ ೯೩ ॥

ತೋರುವ ಕುಲಗಿರಿಯು । ನ್ನೇರಿ ತಪದೊಳಗಿರ್ದು ।
ಬೇರೊಂದು ಪದವೆಣಿಸಿದರೆ ಬೆಳೆದ ಹೊಲ ।
ಸೂರೆಹೋಹಂತೆ. ಸರ್ವಜ್ಞ. ॥ ೯೪ ॥

ಯತಿಗೇಕೆ ಕೋಪ ದು । ರ್ಮತಿಗೇಕೆ ಪರಜ್ಞಾನ ।
ಪತಿವ್ರತೆಗೇಕೆ ಪರನೋಟ, ಯೋಗಿಗೆ ।
ಸ್ತುತಿನಿಂದೆ ಏಕೆ ಸರ್ವಜ್ಞ. ॥ ೯೫ ॥

ಬಂದುದನೆ ತಾ ಹಾಸಿ । ನಿಂದದನೆ [illegible] ಪೊತ್ತು ।
ಬಂದದನೆ ಮೆಟ್ಟಿನಡೆವಾತನಿಗೆ ವಿಧಿ ।
ಮುಂದೆ ಓಡುವದು ಸರ್ವಜ್ಞ. ॥ ೯೬ ॥

ಬೆಣ್ಣೆ ಬೆಂಕಿಯು ನಡುವೆ । ತಣ್ಣಗಿರಬಪ್ಪುದೇ ।
ಹೆಣ್ಣಿದ್ದ ಬಳಿಯು ಒಡನಾಡೆ ಯೋಗಿ ತಾ ।
ಮಣ್ಣಿಗೆ ಮಣ್ಣಾದ. ಸರ್ವಜ್ಞ. ॥ ೯೭ ॥

ವಚನದಲ್ಲೆಲ್ಲಾರು । ಶುಚಿ ವೀರ ಧೀರರು ।
ಕುಚ ಹೇಮ ಶಸ್ತ್ರ ಸೋಂಕಲು ಲೋಕದೊಳ ।
ಗಚಲದವರಾರೊ. ಸರ್ವಜ್ಞ. ॥ ೯೮ ॥

ಎಲ್ಲ ಹಿರಿಯರುಗಳು । ಬಲ್ಲಗರ್ವರುಗಳು ।
ನಲ್ಲೆಯರು ಬಂದು ಪಿಡಿದರೆ ಲೋಕದೊಳ ।
ಗೊಲ್ಲದವರಾರೊ ಸರ್ವಜ್ಞ. ॥ ೯೯ ॥

ತನ್ನ ತಾನರಿದವಗೆ । ಮುನ್ನಹೊಂದಳು ಮಾಯೆ ।
ಉನ್ನತನಪ್ಪ ಗಜವೇರಿ ಬರುವವನು ।
ಕುನ್ನಿಗಂಜುವನೆ. ಸರ್ವಜ್ಞ. ॥ ೧೦೦ ॥

ಇಲ್ಲದ ಮಾಯೆಯನು । ಲಲ್ಲೆನ್ನಲರಿಯದೆ ।
ಬಲ್ಲಿತ್ತೆ ಮಾಯೆಯನ ಬೇಡಿ ತಿಳಿಯಲ್ಕೆ ।
ಎಲ್ಲಿಹುದು ಮಾಯೆ? ಸರ್ವಜ್ಞ. ॥ ೧೦೧ ॥

ಕುಂಡಲಿಯು ಕಂಡಣ್ಣ ಮಿಂಡೇರಿಗೊಲಿವನೆ ।
ಪೆಂಡು ಸಕ್ಕರೆಯು ಮೆಲುಗಲಿತ ಯೋಗಿ ಮುಗ್ಗು ।
ಹಿಂಡಿ ತುಂಬುವನೆ. ಸರ್ವಜ್ಞ. ॥ ೧೦೨ ॥

ಮೂಲಮಂತ್ರವನರಿತು ಲೀಲೆಯಿಂದಾಡುತಿಹ ।
ಶೂಲಿಯ ಶರಣ ಸತಿಯರನು ತಃ ಬಿಟ್ಟ ।
ಮಲವು ಎಂದರಿವ. ಸರ್ವಜ್ಞ. ॥ ೧೦೩ ॥

ಮಂಡಿಸಿದ ಮನವಿಲ್ಲ ದಂಡಿಸಿದ ತನುವಿಲ್ಲ ।
ಕಂಡಕಂಡವರು ಹರಿದರೆ ಕೈಲಾಸ ।
ರಂಡೆಯು ಹೊರಸೆ. ಸರ್ವಜ್ಞ. ॥ ೧೦೪ ॥

---

[2ನೇ ಪುಟದಿಂದ ಮುಂದುವರಿದುದು]

೩೩. ದರ್ಶನದ ಕಥೆಗಳು — ಶ್ರೀ। ಬಿ. ಶಂಕರ ಭಟ್ಟ ಮತ್ತು ಶ್ರೀ। ಬಿ. ಎಂ. ಶರ್ಮಾ.
೩೪. ಅಳುವಿನ ಹೊಳೆ ಮತ್ತು ಕೇಶವಭೂಪ [ಮಕ್ಕಳ ಕಥೆಗಳು] — "ನವಗಿರಿನಂದ."
೩೫. ಶರಾಬಿನ ಸೀಪಾಯಿಗಳು — ಶ್ರೀ। ಬಳ್ಕೂಡು ಸುಬ್ರಾಯ ಅಡಿಗ.
೩೬. ಗುಮಾನಿಕವಿಯ ಉಪದೇಶ ಶತಕ — ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೩೭. ನಿಮಗೆ ಗೊತ್ತಿದೆಯೋ? (ದ್ವಿತೀಯ ಮುದ್ರಣ) — ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೩೮. ಚತುರ ಚಮತ್ಕಾರ — ಡಾ। ಎಸ್. ಪಿ. ಭಟ್.
೩೯. ಸತೀ ಸಾವಿತ್ರಿ [ಏಕಾಂಕ ನಾಟಕ] — ಶ್ರೀ। ಪಿ. ವೆಂಕಟರಮಣ ಭಟ್ಟ.
೪೦. ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು. — ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೪೧. ಭಾರತದ ಮಂತ್ರಿಮಂಡಲಗಳು. (ತೃತೀಯ ಮುದ್ರಣ.)
೪೨. ಕಾಲುಬಳೆಯ ಕತೆ — ಶ್ರೀಮತಿ ಬಿ. ಎಸ್. ರತ್ನಮ್ಮ.

| | | |
|---|---|---|
| ೪೩. | ಭಾರತದ ನಾಲ್ಕು ಕಲಶಗಳು | ಶ್ರೀ। ಟಿ. ಚಂದ್ರರಾಜ ಸೆಟ್ಟಿ. |
| ೪೪. | ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು | ಶ್ರೀ। ಎಲ್. ಎಸ್. ನಾಯಕ. |
| ೪೫. | ಸುಭಾಷಿತ (ನೀತಿವಚನಗಳು) [ದ್ವಿ. ಮು.] | ಶ್ರೀ। ಎಂ. ಸುಬ್ರಾಯನ್, ವಿದ್ವಾನ್. |
| ೪೬. | ೧೮೫೭ರ "ಸಿಪಾಯಿದಂಗೆ" | ಶ್ರೀ। ಸುಭಾಷ್ಚಂದ್ರ ಶೆಣೈ, ಬದಿಯಡ್ಕ. |
| ೪೭. | ಅಕಾಂಡತಾಂಡವ (ರೇಡಿಯೋ ನಾಟಕ) | ಶ್ರೀ। ಬಿ. ದಾಮೋದರ ಬಾಳಿಗ, ಬಿ.ಎ. |
| ೪೮. | ಸಾಹಸದ ಕಥೆಗಳು | ಶ್ರೀ। ಕುಡ್ವಿ ವಾಸುದೇವ ಶೆಣೈ. |
| ೪೯. | ಸಂಜ್ಞಾ ಜ್ಞಾನಕೋಶ (ಪ್ರಥಮ ಭಾಗ) | ಡಾ। ಎಸ್. ಪಿ. ಭಟ್. |
| ೫೦. | ಪಂಡಿತನ ಪಿಟಿಲು | ಶ್ರೀ। ಕುಡ್ವಿ ವಾಸುದೇವ ಶೆಣೈ. |
| ೫೧. | ಭೋಗಯಾತ್ರೆ (ಆಚಾರ್ಯ ವಿನೋಬಾಭಾವೆ) | ಶ್ರೀ। ಎಲ್. ಎಸ್. ನಾಯಕ. |
| ೫೨. | ಸಂಗ್ರಾಮಸಿಂಹ (ಐತಿಹಾಸಿಕ ಕಥನ) | ಶ್ರೀ। ಅ. ಗೌ. ಕಿನ್ನಿಗೋಳಿ ವಿದ್ವಾನ್. |
| ೫೩. | ಧರ್ಮ ಶಿಕ್ಷಾ | ಶ್ರೀ। ಕೋ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್. |
| ೫೪. | ಮಹಾತ್ಮ (ಪೂಜ್ಯ ಬಾಪೂಜಿ) | ಶ್ರೀ। ಎಲ್. ಎಸ್. ನಾಯಕ್. |
| ೫೫. | ಮೀರಾಬಾಯಿ (ಏಕಾಂಕ ನಾಟಕ) | ಶ್ರೀ। ಸಂ. ಜ. ರಾವ್. |
| ೫೬. | ವೀರರಮಣಿ ಕರ್ಮದೇವಿ | ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್. |
| ೫೭. | ಅರಳಿದ ನಗು | ಶ್ರೀ। ಬಳ್ಕೂರು ಸುಬ್ರಾಯ ಅಡಿಗ, ವಿದ್ವಾನ್. |
| ೫೮. | ಸಚಿತ್ರ ಜಪಾನ್ | ಶ್ರೀ। ಟಿ. ರಮೇಶ ಪೈ. |
| ೫೯. | ಚುಟ್ಟಬಿಟ್ಟದಿಟ್ಟ | ಡಾ। ಎಸ್. ಪಿ. ಭಟ್. |
| ೬೦. | ನಿರಪರಾಧಿ | ಶ್ರೀ। ಎಲ್. ಎಸ್. ನಾಯಕ್. |
| ೬೧. | ಭಕ್ತವಾಣಿ | ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ. |
| ೬೨. | ಜಾನಪದ ಸಾಹಿತ್ಯ | ಶ್ರೀ। ಪಡಾರು ಮಹಾಬಲೇಶ್ವರ ಭಟ್. |
| ೬೩. | ಡಾಕ್ಟರ್ ಆರೋಗ್ಯಮ್ | ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್. |
| ೬೪. | ಲೌಕಿಕ ನ್ಯಾಯಗಳು | ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ. |
| ೬೫. | ‡ಶಿಶುಪಾಲ ಮಾನಭಂಗ | ಶ್ರೀ। ಕೆ. ಸುಭಾಷಚಂದ್ರ ಶೆಣೈ, ಬದಿಯಡ್ಕ. |
| ೬೬. | ಜರಾಸಂಧ ವಧೆ | ಶ್ರೀ। ಎ. ವಿ. ಮಯ್ಯ, ಬಂಟ್ವಾಳ. |
| ೬೭. | ಪ್ರಧಾನಾಮಾತ್ಯ ಪಂಡಿತ ಜವಾಹರಲಾಲ ನೆಹರು | ಶ್ರೀ। ಕುಡ್ವಿ ವಾಸುದೇವ ಶೆಣೈ. |
| ೬೮. | ಕರುಣೆ ಮತ್ತು ಇತರ ಕಥೆಗಳು | ಶ್ರೀ। ಬಳ್ಕೂರು ಸುಬ್ರಾಯ ಅಡಿಗ. |
| ೬೯. | ಶ್ರೀಕ್ಷೇತ್ರ ಉಡುಪಿ [ದ್ವಿ. ಮು.] | ಶ್ರೀ। ಕೆ. ಪ್ರಭಾಕರ ರಾವ್. |
| ೭೦. | ವಿನೋದ ವಿಹಾರ | —(ಆರಿಸಿ ತೆಗೆದ ನಗೆಹನಿಗಳು) |
| ೭೧. | ಭಾರತದ ಗತವೈಭವ | ಶ್ರೀ। ಟಿ. ಚಂದ್ರರಾಜ ಸೆಟ್ಟಿ. |
| ೭೨. | ಸತ್ಯ ಹರಿಶ್ಚಂದ್ರ (ದ್ವಿತೀಯ ಮುದ್ರಣ) | ಶ್ರೀ। ಪಿ. ವೆಂಕಟ್ರಮಣ ಭಟ್ಟ. |
| ೭೩. | ಸೂಕ್ತಿಗಳು | ಶ್ರೀ। ಕೆ. ವೆಂಕಟರಾಮಾಚಾರ್ಯ. |
| ೭೪. | ಯಕ್ಷಗಾನ ಕಲಾವಿದರು (ಸಚಿತ್ರ ಪರಿಚಯ) | ಶ್ರೀ। ವಿಘ್ನೇಶ್ವರ ಶರ್ಮಾ ತದ್ದಲಸೆ. |
| ೭೫. | ದೇವರ ಸಾಮ್ರಾಜ್ಯದಲ್ಲಿ ಮತ್ತು ಇತರ ಕಥೆಗಳು | ಶ್ರೀ। ಎಸ್. ಎನ್. ನವಕಾನ. |
| ೭೬. | ಕ್ರಾಂತಿಕಂಠೀರವ ಭಗತ್ ಸಿಂಘ | ಶ್ರೀ। ಸತ್ಯಾಶ್ರಯ ಕಾಮತ್. |
| ೭೭. | ಜಾತಕಪತನ ಮತ್ತು ಇತರ ಕಥೆಗಳು | ಶ್ರೀ। ಕುಡ್ವಿ ವಾಸುದೇವ ಶೆಣೈ. |

೭೮. ಅಮೃತವಾಣಿ (ಲೋಕನಾಯಕರ ವಚನಗಳು) ಶ್ರೀ| ಎಮ್. ಶ್ರೀಧರ ಕಿಣಿ.

೭೯. ಮಾಯಾಮೃಗ (ಏಕಾಂಕ ಪ್ರಹಸನ) ಶ್ರೀ| ಎ. ವಿ. ಮಯ್ಯ.

೮೦. ಡಾಕ್ಟರ್ ಗಾಂಧೀಜಿ ಶ್ರೀ| ಮರಕ್ಕಿಣಿ ಶಂಕರನಾರಾಯಣ ಭಟ್.

೮೧. ಶ್ರೀಶಂಕರಾಚಾರ್ಯರ ಜೀವನಚರಿತ್ರೆ(ತೃ. ಮು.) ಡಾ| ಪಿ. ಎಸ್. ವಾಸುದೇವ ಶರ್ಮ.

೮೨. " ವಿರಚಿತ ಸ್ತೋತ್ರಗಳು " " "

೮೩. ಬೆಡಗಿನ ನಾಡು—ಕೊಡಗು: ಶ್ರೀ| ಶ್ರೀಪತಿರಾವ್ ಫಲಿಮಾರ್ಕರ್, ಬಿ.ಎ, ಬಿ.ಟಿ.

೮೪. ಅಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು. ಶ್ರೀ| ಎಲ್. ಎಸ್. ನಾಯಕ್.

೮೫. ಮಂಗಳೂರಿಂದ ಮಧುರೆಗೆ ಶ್ರೀ| ಟಿ. ಚಂದ್ರರಾಜ ಸೆಟ್ಟಿ.

೮೬. ಸತೀ ವೃಂದಾ (ಏಕಾಂಕ ನಾಟಕ) ಶ್ರೀ| ಕೆ. ಸುಭಾಷ್ಚಂದ್ರ ಶೆಣೈ.

೮೭. ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ (ಎರಡು ಏಕಾಂಕಗಳು)

೮೮. ಗೃಹವೈದ್ಯ ಶ್ರೀ| ಬಳ್ಕೂರು ಸುಬ್ರಾಯ ಅಡಿಗ.

೮೯. ನಮ್ಮ ನಾಟಕಗಳು ಶ್ರೀ| ಎಂ. ಎಸ್. ಆಚಾರ್.

೯೦. ಜಾನಪದ ಕಥೆಗಳು ಶ್ರೀ| ಕೆ. ವೆಂಕಟರಾಯಾಚಾರ್ಯ.

೯೧. ಕೆಲವು ಉಪಯುಕ್ತ ಸಲಹೆಗಳು ಶ್ರೀ| ಬಳ್ಕೂರು ಸುಬ್ರಾಯ ಅಡಿಗ.

೯೨. ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ ಶ್ರೀ| ಕೆ.ಎಲ್.ಎನ್. ಉಪಾಧ್ಯಾಯ.

೯೩. ಹೋಮಿಯೋಪಥಿ ಚಿಕಿತ್ಸಾಸಾರ ಶ್ರೀ| ಬೋಳೂರು ಎಸ್. ರಾವ್.

೯೪. ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು ಶ್ರೀ| ಮಂಜುನಾಥ ಭಾಗವತ.

೯೫. ಪುನರುಜ್ಜೀವನ (ಏಕಾಂಕ ನಾಟಕ) ಶ್ರೀ| ಗೋವಿಂದ ಭಟ್ಟ, ಶೇಡಿಗುಮ್ಮೆ.

೯೬. ಪ್ರಥಮ ಚಿಕಿತ್ಸೆಯ ಕೈಪಿಡಿ ಶ್ರೀ| ಬೋಳೂರು ಎಸ್. ರಾವ್.

೯೭. ಹಸ್ತರೇಖಾ ವಿಜ್ಞಾನ ಡಾ| ಕೆ. ಕೆ. ಕಲ್ಕೂರ್.

೯೮. ಸ್ವಾತಂತ್ರ್ಯ (ಏಕಾಂಕ ನಾಟಕ) ಶ್ರೀ| ಕೆ. ಎನ್. ಭಟ್, ಶಿರಾಡಿಪಾಲ್.

೯೯. ಭಾರತೀಯ ಸ್ವಾತಂತ್ರ್ಯಸಂಗ್ರಾಮ ಶ್ರೀ| ಎಮ್. ರಘುನಂದನ ರಾವ್.

೧೦೦. ಭಕ್ತ ಕುಚೇಲ (ಏಕಾಂಕ ಸಂಗೀತ ನಾಟಕ) ಶ್ರೀ| ಅಂಬಾತನಯ.

೧೦೧. ಉತ್ತರನ ಪೌರುಷ (ಯಕ್ಷಗಾನ) ಶ್ರೀ| ಪುಟ್ಟಣ್ಣ.

೧೦೨. ಕುಮಾರ (ವಿನೋದ ಕಥೆ) ಶ್ರೀ| ಕುಡ್ಪಿ ವಾಸುದೇವ ಶೆಣೈ.

೧೦೩. ಕೇರಳ ಜ್ಯೋತಿಷ (ಪ್ರಮುಖ ಯೋಗಗಳು) ವೈದ್ಯಗುಣ ಎಂ. ಆರ್. ಭಟ್.

೧೦೪. ಒಗಟುಗಳ ಗೊಂಚಲು (ಒಗಟುಗಳು ಭಾಗ ೩) ಡಾ| ಎಸ್. ಪಿ. ಭಟ್.

೧೦೫. ಊರ-ಔಷಧಿಗಳು ಶ್ರೀ| ಬೋಳೂರು ಎಸ್. ರಾವ್.

೧೦೬. ಮದ್ವೆ ಅವಾಂತರ (ಏಕಾಂಕ ಪ್ರಹಸನ) "ಅಷ್ಟಾವಕ್ರ".

೧೦೭. ಜಗತ್ತಿನ ವಿಜ್ಞಾನಿಗಳು ಶ್ರೀ| ಟಿ. ಚಂದ್ರರಾಜ ಸೆಟ್ಟಿ.

೧೦೮. ನಮ್ಮ ದೇಶ ಶ್ರೀ| ಕುಡ್ಪಿ ವಾಸುದೇವ ಶೆಣೈ.

೧೦೯. ಗ್ರಾಮ ಸ್ವಾತಂತ್ರ್ಯ ಶ್ರೀ| ಎ. ವಿ. ಮಯ್ಯ.

೧೧೦. ನಮ್ಮ ಕನ್ನಡ ನಾಡು ಶ್ರೀ| ಕುಡ್ಪಿ ವಾಸುದೇವ ಶೆಣೈ.

೧೧೧. ಭಕ್ತ ಧ್ರುವ (ಏಕಾಂಕ ನಾಟಕ) ಶ್ರೀ| ಸುಬ್ರಾಯ, ಅನಂತಪುರ.

೧೧೨. ಕರ್ಣಾಟಕ ಕವಿಚರಿತ್ರೆ ಶ್ರೀ| ಬಿ. ಈಶ್ವರಯ್ಯ.

೧೧೩. ಬೇಡನ ಮಗಳು (ಏಕಾಂಕ ನಾಟಕ) ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೧೧೪. ಸ್ವಾಮಿ ವಿವೇಕಾನಂದ ಶ್ರೀ। ಎಂ. ಕೃಷ್ಣರಾವ್, ಬಿ.ಎ.,
೧೧೫ ನಮ್ಮ ಆಹಾರ ಶ್ರೀ। ಕೆ. ಸಿ. ವೈದ್ಯರ್.
೧೧೬. ಗಾದೆಗಳೂ ಜ್ಞಾನೋಕ್ತಿಗಳೂ ಶ್ರೀಮತಿ ಬೇಬಿ ಸರೋಜಿನಿ.
೧೧೭. ಪುರಂದ ದಾಸರು [ಏಕಾಂಕ ನಾಟಕ] ಶ್ರೀ। ಪದ್ಮನಾಭ ಸೋಮಯಾಜಿ.
೧೧೮. ಮನುಷ್ಯಯಜ್ಞ ಶ್ರೀ। ಬಿ. ಶಂಕರ ಭಟ್ಟ.
೧೧೯. ಹೆಮ್ಮಕ್ಕಳ ಹಾಡುಗಳು ಶ್ರೀ। ಪಡಾರು ಮಹಾಬಲೇಶ್ವರ ಭಟ್.
೧೨೦ ನಮ್ಮ ಹಬ್ಬಗಳು ಶ್ರೀ। ಶ್ಯಾಮರ್, ಪುತ್ತೂರು.
೧೨೧. ವೀರಾಗ್ರಣಿ ಕರ್ಣ (ಏಕಾಂಕ ನಾಟಕ) ಶ್ರೀ। ಅಮ್ಮೆಂಬಳ ಅನಂತಯ್ಯ, ನಾವಡ.
೧೨೨. ಸೂರ್ಯನೇ ನನಗೆ ಸಾಕ್ಷಿ ಮತ್ತು ಇತರ ಕಥೆಗಳು ಶ್ರೀ। ಎನ್.ಎಸ್.ನವಕಾನ.
೧೨೩. ನವ ಕೈಲಾಸ (ಯಕ್ಷಗಾನ) ಶ್ರೀ। ಮಾಳಕೋಡ ನಾರಾಯಣ.
೧೨೪. ಕುಶ–ಲವ (ಏಕಾಂಕ ಪೌರಾಣಿಕ ನಾಟಕ) ಶ್ರೀ। ಬಿ. ಈಶ್ವರಯ್ಯ
೧೨೫. ಅಮರನಾಥ ಯಾತ್ರೆ ಶ್ರೀ। ಗುಂಡ್ಮಿ ಮಹಾಬಲ ಭಟ್ಟ.
೧೨೬. ಸಂಜ್ಞಾ ಪ್ರಾಧ್ಯಾಪಕ ಮತ್ತು ಇತರ ಕಥೆಗಳು ಶ್ರೀ। ಎಂ. ಕೃಷ್ಣರಾವ್, ಬಿ. ಎ
೧೨೭. ದ್ವಾರಕಾ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೮. ಭಾರತದ ಸಂಗೀತ ಜ್ಯೋತಿಗಳು ಶ್ರೀ। ಎಚ್. ಸುಂದರರಾಮರಾವ್.
೧೨೯. ಮಕ್ಕಳ ಪದ್ಯಗಳು ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್.
೧೩೦. ನಯೆ ಪೈಸೆ
೧೩೧. ತಾಯಿಗಾಗಿ ಮತ್ತು ಇತರ ಕಥೆಗಳು ಶ್ರೀ। ಬಿ.ಶಂಕರಭಟ್, ವಿದ್ವಾನ್
೧೩೨. ಸಂತ ಮೀರಾಬಾಯಿಯ ಭಜನಾ ಗೀತಗಳು. ಶ್ರೀ। ಎಚ್.ಸುಂದರರಾಮರಾವ್
೧೩೩. ಅಕ್ಷಯಪಾತ್ರೆ ಶ್ರೀ। ಟಿ ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ
೧೩೪. ಉ.ಕ.ದ ಯಕ್ಷಗಾನ ಮಂಡಲಿಗಳು ಶ್ರೀ।ಮಂಜುನಾಥ ಭಾಗವತ, ಕಡತೋಕ
೧೩೫. ಅಕ್ಬರ–ಬೀರಬಲ ವಿನೋದ (ದ್ವಿ. ಮು.) ಶ್ರೀ। ಮಾಧವ ಭಟ್, ಮಡಿಕೇರಿ.
೧೩೬. ವೈರಾಗ್ಯನಿಧಿ ಶ್ರೀ। ಕೆ. ಎಸ್. ಶರ್ಮ, ವಿದ್ವಾನ್
೧೩೭. ಭರತನ ಬಂಧುಪ್ರೇಮ ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೧೩೮. ದ್ವಾದಶ ಜ್ಯೋತಿರ್ಲಿಂಗಗಳು ಶ್ರೀ। ಗುಂಡ್ಮಿ ಮಹಾಬಲ ಭಟ್ಟ
೧೩೯. ಪರೀಕ್ಷೆ ಮತ್ತು ಇತರ ಕಥೆಗಳು ಶ್ರೀ। ಎಂ. ಗೋಪಾಲ ಭಟ್
೧೪೦. ಗಿಲ್ಟುಮಾಡುವ ವಿಧಾನಗಳು ಶ್ರೀ। ಎಂ. ಶ್ರೀನಿವಾಸರಾವ್
೧೪೧. ಕನ್ನಡ ಗಾದೆಗಳು ಶ್ರೀ। ಕುರಾಡಿ ಸೀತಾರಾಮ ಅಡಿಗ
೧೪೨. ಮಹಾತ್ಮಾ ಉದಂಕ (ಏಕಾಂಕ ನಾಟಕ) ಮಣಿಲ "ಶಿವಶಂಕರ"
೧೪೩. ಭಕ್ತ ಪ್ರಹ್ಲಾದ (ಪೌರಾಣಿಕ ಏಕಾಂಕ ನಾಟಕ) ಶ್ರೀ। ಎ. ವಿ. ಮಯ್ಯ
೧೪೪. ಧುನಿರಾಣಿ ಗಂಗೆ ಶ್ರೀ। ಕೆ. ಸುಭಾಷ್ಚಂದ್ರ ಶೆಣೈ
೧೪೫. ಸರ್ವಜ್ಞ ವಚನಗಳು ಶ್ರೀ। ಕುಡ್ವಿ ವಾಸುದೇವ ಶೆಣೈ

ವಿಶೇಷ ಪ್ರಕಟಣೆ: ಮಕ್ಕಳ ಹಾಡುಗಳು (ದ್ವಿತೀಯ ಮುದ್ರಣ)

‡ ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ANNA PUBLICATIONS, CAR STREET, MANGALORE-

# ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊ ಗುವ ಒಂದು ಆಪದ್ಧನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆ ಬುದು ಸಹಜವೇ. ಆದರೆ ಕಾಲ ಕಳೆದುಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತು ಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯ ಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ, ಹಲವಾರು ಆಕರ್ಷ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ—

**ಸಿಂಡಿಕೇಟ್ ಬ್ಯಾಂಕಿನಲ್ಲಿ** ವಿಚಾರಿಸಿರಿ.

**96** ಶಾಖೆಗಳು

ರೂ. 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ
ಸಹಕರಿಸಬಲ್ಲ ಶೆಡ್ಯೂಲ್ಡ್ ಬೇಂಕು.

**ಟಿ. ಎ. ಪೈ,** ಬಿ. ಕಾಂ. (ಬೊಂಬಾಯಿ)
ಎಫ್. ಆರ್. ಇ. ಎಸ್. (ಲಂಡನ್) ಎ. ಐ. ಐ. ಬಿ.,
ಜನರಲ್ ಮೆನೇಜರ್.

ಡಾ| **ಟಿ. ಎಂ. ಎ. ಪೈ,**
ಎಮ್. ಬಿ., ಬಿ. ಎಸ್.,
ಮೆನೇಜಿಂಗ್ ಡೈರೆಕ್ಟರ್.

THE

**Canara Industrial & Banking Syndicate, Ltd.**

Head Office: **UDIPI,** S. India.



Edited, Printed & Published by K. V. Shenoy
at the Prabhat Printers, Ltd., Mangalore.